# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.739/2016/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:10.7.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯು:–** ಶ್ರೀ ರಂಗನಾಥ, ಡಾಟಾ ಎಂಟ್ರಿ ಆಪರೇಟರ್, ನಾಡಕಛೇರಿ, ತ್ಯಾಮಗೊಂಡ್ಲು ಹೋಬಳಿ, ಇವರು ಅಕ್ರಮವಾಗಿ ಆದಾಯ ದೃಢೀಕರಣ ಪ್ರಮಾಣಪತ್ರವನ್ನು ಕಂಪ್ಯೂಟರ್ ಶಾಖೆಯಿಂದ ನೀಡಿದ್ದರಿಂದ ಇವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ ಎನ್. ರಾಜಣ್ಣ, ಅಡೇಪೇಟೆ ನಿವಾಸಿ, ನೆಲಮಂಗಲ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಸಿ.ಎನ್. ಹನುಮಂತರಾಯಪ್ಪ, ಉಪ ತಹಶೀಲ್ದಾರ್, ನೆಲಮಂಗಲ ತಾಲ್ಲೂಕು, (2) ತಹಶೀಲ್ದಾರ್, ನೆಲಮಂಗಲ ತಾಲ್ಲೂಕು, (3)ಶ್ರೀ ಬಸವರಾಜು, ಕಂದಾಯ ನಿರೀಕ್ಷಕರು, ತ್ಯಾಮಗೊಂಡ್ಲು ಹೋಬಳಿ, (4) ಶ್ರೀ ವಾಸು, ಗ್ರಾಮಲೆಕ್ಕಿಗರು, ಕುಲುವನಹಳ್ಳಿ ವೃತ್ತ ನೆಲಮಂಗಲ ತಾಲ್ಲೂಕು (5) ಶ್ರೀಮತಿ ಮಧುಬಾಯಿ, ಪ್ರಥಮ ದರ್ಜೆ ಸಹಾಯಕರು, ನಾಡಕಛೇರಿ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲ್ಲೂಕು, ಮತ್ತು (6) **ಶ್ರೀ ರಂಗನಾಥ, ಡಾಟಾ ಎಂಟ್ರಿ ಆಪರೇಟರ್, ನಾಡಕಛೇರಿ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲ್ಲೂಕು** (ಇನ್ನು ಮುಂದೆ ಕ್ರಮವಾಗಿ 1ರಿಂದ 6ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ನೆಲಮಂಗಲ ತಾಲ್ಲೂಕು ತಿಪ್ಪಗೊಂಡನಹಳ್ಳಿ ಗ್ರಾಮದ ವಾಸಿ ಶ್ರೀ ಜಿ.ಶಿವಪ್ರಸಾದ್ ಬಿನ್ ಗಂಗಾಧರಯ್ಯ ಎಂಬುವವರಿಗೆ ಎದುರುದಾರರು ದಿ.1.3.2014ರಂದು ಆದಾಯ ದೃಢೀಕರಣ ಪ್ರಮಾಣಪತ್ರ ನೀಡಿರುತ್ತಾರೆ. ಆದರೆ ಜಿ.ಶಿವಪ್ರಸಾದ್ ಅವರು ತಿಪ್ಪಗೊಂಡನಹಳ್ಳಿ

ವಾಸಿಯಾಗಿರದಿದ್ದರೂ ಅವರಿಗೆ ಆದಾಯ ಪ್ರಮಾಣ ಪತ್ರ ಸಂ.ಆರ್.ಡಿ.003899010541 ದಿ.1.3.2014ರಂದು ನೀಡಿರುತ್ತಾರೆ. ಜಿ.ಶಿವಪ್ರಸಾದ್ ಅವರು ನೋಟರಿ ಮೂಲಕ ಪ್ರಮಾಣಪತ್ರ ಸಲ್ಲಿಸಿದ್ದು ಆದರೆ ಅದರಲ್ಲಿಯ ಹೇಳಿಕೆಗಳು ಸುಳ್ಳಿನಿಂದ ಕೂಡಿರುತ್ತವೆ. ಎದುರುದಾರರು ಈ ಕಾನೂನುಬಾಹಿರ ಆದಾಯ ಪ್ರಮಾಣಪತ್ರ ನೀಡಿ ಕರ್ತವ್ಯಲೋಪವೆಸಗಿದ್ದು, ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಡಾ.ಜಿ.ಶಿವಪ್ರಸಾದ್ ಅವರ ಹೆಸರಿನಲ್ಲಿ ತಿಪ್ಪಗೊಂಡನಹಳ್ಳಿ ಗ್ರಾಮದ ಯಾವುದೇ ಅರ್ಜಿಯು ನಮೂದಿಸಿರುವುದಾಗಲೀ ಅಥವಾ ವಿಲೇ ಅನುಮೋದನೆಯಾಗಿರುವುದಾಗಲೀ ಕಂಡುಬರುವುದಿಲ್ಲ. ಗ್ರಾಮ ಲೆಕ್ಕಾಧಿಕಾರಿ ಬ್ಯಾಡರಹಳ್ಳಿ ವೃತ್ತ ಇವರು ಸಹ ಶಿವಪ್ರಸಾದ್ ಅವರ ಹೆಸರಿನಲ್ಲಿ ಆದಾಯ ದೃಢೀಕರಣ ಪತ್ರ ಕೋರಿರುವ ಅರ್ಜಿಯನ್ನು ಸ್ವೀಕರಿಸಿರುವುದಿಲ್ಲವೆಂದು ಲಿಖಿತ ಹೇಳಿಕೆ ನೀಡಿರುತ್ತಾರೆ. ಆದಾಯ ದೃಢೀಕರಣ ಪತ್ರ ನೀಡುವ ಪೂರ್ವದಲ್ಲಿ ಗಣಕಯಂತ್ರದಲ್ಲಿ ಡಾಟಾ ಆಪರೇಟರ್ ಅರ್ಜಿದಾರರ ಎಲ್ಲ ಮಾಹಿತಿಯನ್ನು ತುಂಬಿ ಚೆಕ್‌ಲಿಸ್ಟ್ ತಯಾರಿಸಿ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಸಲ್ಲಿಸುತ್ತಾರೆ. ಅವರು ಉಪತಹಶೀಲದಾರರ ಸಹಿ ಪಡೆದುಕೊಂಡು ಅದನ್ನು ಪರಿಶೀಲಿಸಿ ರಾಜಸ್ವ ನಿರೀಕ್ಷಕರಿಗೆ ನೀಡುತ್ತಾರೆ. ಆನಂತರ ಅವರು ಸಂಬಂಧಪಟ್ಟ ಗ್ರಾಮಕ್ಕೆ ಭೇಟಿ ನೀಡಿ ಮಹಜರು/ದಾಖಲೆಗಳನ್ನು ಪಡೆದು ನಾಡಕಛೇರಿಗೆ ಸಲ್ಲಿಸುತ್ತಾರೆ. ಡಾ.ಜಿ.ಶಿವಪ್ರಸಾದ್ ಇವರಿಗೆ ಎಲ್ಲ ಮೂಲಗಳಿಂದ ವಾರ್ಷಿಕ ಆದಾಯ ರೂ.1.80 ಲಕ್ಷ ಮಾತ್ರವೆಂದು ನಮೂದಿಸಿದ್ದನ್ನು, ಕೈತಪ್ಪಿನಿಂದ ತಿರಸ್ಕರಿಸುವ ಬದಲಾಗಿ ಅನುಮೋದಿಸಲಾಗಿದೆ. ಇದು ಕೆಲಸದ ಒತ್ತಡದಲ್ಲಿ ಜರುಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಡಾ. ಡಾ.ಜಿ.ಶಿವಪ್ರಸಾದ್ ಇವರಿಗೆ ಆದಾಯ ದೃಢೀಕರಣ ಪತ್ರ ನೀಡಿರುವ ಸಂದರ್ಭದಲ್ಲಿ ತಾವು ಅಲ್ಲಿ ಕೆಲಸ ನಿರ್ವಹಿಸುತ್ತಿರಲಿಲ್ಲವಾದ್ದರಿಂದ ಪ್ರಕರಣದಿಂದ ತನ್ನನ್ನು ಕೈಬಿಡಬೇಕೆಂದು ಕೋರಿದ್ದಾರೆ.

5. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಈ ಪ್ರಕರಣದ ಬಗ್ಗೆ ನಾಡಕಛೇರಿಯ ಅಟಲ್ ಜೀ ಜನಸ್ನೇಹಿ ಕೇಂದ್ರದ ಡಾಟಾ ಎಂಟ್ರಿ ಆಪರೇಟರ್ ಆದ 6ನೇ ಎದುರುದಾರರು ಹಾಗೂ ವಿಷಯ ನಿರ್ವಾಹಕರಾದ 5ನೇ ಎದುರುದಾರರು ದಿ.15.2.2014ರಿಂದ 2.3.2014ರವರೆಗೆ ಒಟ್ಟು 180 ಜಾತಿ ಆದಾಯ ಪ್ರಮಾಣಪತ್ರದ ಅರ್ಜಿಗಳನ್ನು ಪರಿಶೀಲನೆಗೆ ನೀಡಿರುತ್ತಾರೆ. ಆದರೆ ಡಾ.ಜಿ.ಶಿವಪ್ರಸಾದ್ ಅವರ ಆದಾಯ ದೃಢೀಕರಣ ಪತ್ರಕ್ಕಾಗಿ ಕೋರಿರುವ ಸ್ವೀಕೃತಿ ಸಂ.ಆರ್.ಡಿ.0038899010541 ಅರ್ಜಿಯನ್ನು 5 ಮತ್ತು 6ನೇ ಎದುರುದಾರರು ತಮ್ಮ ವರದಿಗಾಗಿ ಸ್ವೀಕೃತಿ ಅರ್ಜಿಗಳನ್ನು ನೀಡಿರುವುದಿಲ್ಲ. ಹೀಗಾಗಿ ದೃಢೀಕರಣ ಪತ್ರದ ಬಗ್ಗೆ ವರದಿಯನ್ನು ಸಹ ನೀಡಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

6. 4 ರಿಂದ 6ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಆದಾಯ ದೃಢೀಕರಣ ಪ್ರಮಾಣ ಪತ್ರ ಮೇಲಾಧಿಕಾರಿಗಳ ಹಂತದಲ್ಲೇ ವಿಲೇವಾರಿಯಾಗಿದ್ದು, ಆದ್ದರಿಂದ ತಮ್ಮ ಗಮನಕ್ಕೆ ಬಂದಿರುವುದಿಲ್ಲ. ಕಡತ ಪರಿಶೀಲಿಸಲಾಗಿ ಡಾ.ಜಿ.ಶಿವಪ್ರಸಾದ್ ಅವರ ಆದಾಯ ದೃಢೀಕರಣ ಪ್ರಮಾಣಪತ್ರ ಪಡೆದುಕೊಳ್ಳಲು ಸಲ್ಲಿಸಿದ ಯಾವುದೇ ದಾಖಲೆ ಲಭ್ಯವಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

7. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

8. ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರನ್ನು ಗೌರವಾನ್ವಿತ ಉಪಲೋಕಾಯುಕ್ತರ ಮುಂದೆ ಕರೆಸಿ ಡಾ.ಜಿ.ಶಿವಪ್ರಸಾದ್ ಅವರಿಗೆ ನೀಡಿದ ಆದಾಯ ದೃಢೀಕರಣ ಪ್ರಮಾಣಪತ್ರದ ಬಗ್ಗೆ ಯಾವ ದಾಖಲೆಗಳನ್ನು ಪಡೆದುಕೊಳ್ಳಲಾಗಿದೆಯೋ ಅವುಗಳನ್ನು ಹಾಜರುಪಡಿಸಲು ಸೂಚಿಸಿದಾಗ ಆ ಯಾವ ದಾಖಲೆಗಳೂ ಕಛೇರಿಯಲ್ಲಿ ಲಭ್ಯವಿಲ್ಲವೆಂದು ಎದುರುದಾರರೆಲ್ಲರೂ ತಿಳಿಸಿರುತ್ತಾರೆ.

9. ಈ ಕಡತದಲ್ಲಿ ಲಭ್ಯವಿದ್ದ ದಾಖಲೆಗಳನ್ನು ಪರಿಶೀಲಿಸಿದಾಗ ಡಾ.ಜಿ.ಶಿವಪ್ರಸಾದ್ ಅವರು ಮೂಲತ: ತುಮಕೂರು ತಾಲ್ಲೂಕು ಗೊಲ್ಲಹಳ್ಳಿ ಗ್ರಾಮದವರಾಗಿದ್ದು, ಅವರು ತುಮಕೂರು ಜಿಲ್ಲೆಯಲ್ಲಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೊಂದಿರುವ ಜಮೀನುಗಳ ವಿವರ ಈ ಕೆಳಗಿನಂತಿರುತ್ತವೆ.

| ಕ್ರಮ ಸಂಖ್ಯೆ | ಸರ್ವೆ ನಂ. | ಕ್ಷೇತ್ರ | ಗ್ರಾಮ |
|---|---|---|---|
| 1 | 1/4 | 1.10 ಎಕರೆ | ತುಮಕೂರು ತಾಲ್ಲೂಕು ಗೊಲ್ಲಹಳ್ಳಿ |
| 2 | 1/5 | 1.38 ಎಕರೆ | –”– |
| 3 | 1/6 | 0. 29 ಎಕರೆ | –”– |
| 4 | 12/1 | 1.28 ಎಕರೆ | –”– |
| 5 | 39 | 33 ಗುಂಟೆ | –”– |
| 6 | 41 | 27 ಗುಂಟೆ | –”– |
| 7 | 6/1ಎ+1ಸಿ | 2.14 1/2 ಗುಂಟೆ | ತುಮಕೂರು ತಾಲ್ಲೂಕು ಅಗಲಕೋಟೆ |
| 8 | 64/1 | 1 ಎಕರೆ | ಮಲ್ಲಸಂದ್ರ ಗ್ರಾಮ |
| 9 | 64/3 | 1 ಎಕರೆ | ಮಲ್ಲಸಂದ್ರ ಗ್ರಾಮ |
| 10 | 64/12 | 1 ಎಕರೆ | ಮಲ್ಲಸಂದ್ರ ಗ್ರಾಮ |
| 11 | 64/16 | 1 ಎಕರೆ | ಮಲ್ಲಸಂದ್ರ ಗ್ರಾಮ |
| 12 | 64/17 | 1 ಎಕರೆ | ಮಲ್ಲಸಂದ್ರ ಗ್ರಾಮ |
| 13 | 254/2 | 2.25 1/2 ಗುಂಟೆ | ಬೇಗೂರು ಗ್ರಾಮ ದೊಡ್ಡಬಳ್ಳಾಪುರ ತಾ. |
| 14 | 19/6 | 9 1/2 ಗುಂಟೆ | ಬೇಗೂರು ಗ್ರಾಮ ದೊಡ್ಡಬಳ್ಳಾಪುರ ತಾ. |
| 15 | 255/4 | 1.19 ಎಕರೆ | ಬೇಗೂರು ಗ್ರಾಮ ದೊಡ್ಡಬಳ್ಳಾಪುರ ತಾ. |
| 16 | 254 | 2.25 1/2 ಗುಂಟೆ | ಬೇಗೂರು ಗ್ರಾಮ ದೊಡ್ಡಬಳ್ಳಾಪುರ ತಾ. |
| 17 | 255/2 | 1 ಎಕರೆ | ಬೇಗೂರು ಗ್ರಾಮ ದೊಡ್ಡಬಳ್ಳಾಪುರ ತಾ. |
| 18 | 255/3 | 2.30 ಎಕರೆ | ಬೇಗೂರು ಗ್ರಾಮ ದೊಡ್ಡಬಳ್ಳಾಪುರ ತಾ. |

10. ಈ ಮೇಲ್ಕಾಣಿಸಿದಂತೆ ಡಾ.ಜಿ.ಶಿವಪ್ರಸಾದ್ ಅವರು ದೊಡ್ಡಬಳ್ಳಾಪುರ ಉಪವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಾವು ಹೊಂದಿರುವ ಜಮೀನುಗಳ ಬಗ್ಗೆ

ಉಲ್ಲೇಖಿಸಿರುತ್ತಾರೆ. ಅಲ್ಲದೆ ನೆಲಮಂಗಲ ತಾಲ್ಲೂಕು ದೊಡ್ಡೇರಿ ಗ್ರಾಮದ ಸರ್ವೆ ನಂ.111 ಜಮೀನು ಹೊಂದಿದ್ದು ಆದರೆ ಕ್ಷೇತ್ರವನ್ನು ನಮೂದಿಸಿರುವುದಿಲ್ಲ. ಈ ಎಲ್ಲ ಆಸ್ತಿಗಳನ್ನು ಹೊಂದಿದಂತಹ ವ್ಯಕ್ತಿಗೆ ಆದಾಯ ಪ್ರಮಾಣಪತ್ರ ನೀಡುವ ಪೂರ್ವದಲ್ಲಿ ಆತನು ಹೊಂದಿರುವ ಎಲ್ಲ ಆಸ್ತಿಗಳನ್ನು ಪರಿಗಣಿಸಿ ಆತನ ವಾಸಸ್ಥಳ ಪ್ರಮಾಣಪತ್ರ ಪಡೆದುಕೊಂಡು, ಆ ಗ್ರಾಮಕ್ಕೆ ಭೇಟಿ ನೀಡಿ ಸ್ಥಳೀಯ ವ್ಯಕ್ತಿಗಳ ಹೇಳಿಕೆ ದಾಖಲಿಸಿಕೊಂಡು ಆದಾಯ ಪ್ರಮಾಣ ಪತ್ರ ನೀಡಬೇಕಾಗುತ್ತದೆ.

11. ಡಾ.ಜಿ.ಶಿವಪ್ರಸಾದ್ ಅವರಿಗೆ 2014ರಲ್ಲಿ ನೀಡಿರುವ ಆದಾಯ ದೃಢೀಕರಣ ಪತ್ರ ಎಲ್ಲ ಮೂಲಗಳಿಂದ ಅವರ ವಾರ್ಷಿಕ ಆದಾಯ 1.80 ಲಕ್ಷವೆಂದು ನಮೂದಿಸಲಾಗಿರುತ್ತದೆ. ಈ ವಾರ್ಷಿಕ ಆದಾಯವನ್ನು ಪರಿಗಣಿಸಲು ಪಡೆದುಕೊಂಡ ದಾಖಲೆಗಳನ್ನು ಕೇಳಲಾಗಿ ಎದುರುದಾರರು ಅವುಗಳನ್ನು ನೀಡಲು ವಿಫಲರಾಗಿರುತ್ತಾರೆ. ಕಛೇರಿಯಲ್ಲಿಯೂ ಸಹ ಈ ದಾಖಲೆಗಳು ಲಭ್ಯವಿಲ್ಲವೆಂದು ಸ್ವತ: ಎದುರುದಾರರೇ ತಿಳಿಸಿರುತ್ತಾರೆ. ಯಾವುದೇ ವ್ಯಕ್ತಿಗೆ ಆದಾಯ ಪ್ರಮಾಣಪತ್ರ ನೀಡಬೇಕಿದ್ದರೆ ಗ್ರಾಮ ಲೆಕ್ಕಾಧಿಕಾರಿಯಿಂದ ಹಿಡಿದು ತಹಶೀಲ್ದಾರ್‌ವರೆಗೆ ಪರಿಶೀಲನೆ ನಡೆದು ಆ ಪರಿಶೀಲನೆಗೆ ಒಳಪಟ್ಟ ದಾಖಲೆಗಳನ್ನು ಕಛೇರಿಯಲ್ಲಿ ಕಾಯ್ದಿರಿಸಬೇಕಾಗುತ್ತದೆ. ಆದರೆ ಪರಿಶೀಲನೆಗೊಳಪಟ್ಟ ಯಾವುದೇ ದಾಖಲೆಗಳು ಕಛೇರಿಯಲ್ಲಿ ಲಭ್ಯವಿರುವುದಿಲ್ಲವೆಂದರೆ ಎದುರುದಾರರು ಅಕ್ರಮವಾಗಿ ಡಾ.ಜಿ.ಶಿವಪ್ರಸಾದ್ ಅವರಿಗೆ ಆದಾಯ ಪ್ರಮಾಣಪತ್ರ ನೀಡಲು ಭಾಗಿಯಾಗಿದ್ದಾರೆಂದು ಕಂಡುಬರುತ್ತದೆ.

12. ದೂರುದಾರರ ಪ್ರಕಾರ ಡಾ.ಜಿ.ಶಿವಪ್ರಸಾದ್ ಅವರು ಎದುರುದಾರರು ಆದಾಯ ಪ್ರಮಾಣಪತ್ರದಲ್ಲಿ ನಮೂದಿಸಿರುವ ಆದಾಯಕ್ಕಿಂತಲೂ ಅಧಿಕ ವಾರ್ಷಿಕ ಆದಾಯ ಹೊಂದಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ ಎದುರುದಾರರು ಮಾತ್ರ ತಾವು ಈ ಆದಾಯ ದೃಢೀಕರಣ ಪತ್ರ ನೀಡಿರುವುದಿಲ್ಲ, ಈ ಬಗ್ಗೆ ಯಾವುದೇ ದಾಖಲೆಗಳನ್ನು ತಾವು ಪರಿಶೀಲಿಸಿರುವುದಿಲ್ಲವೆಂದು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. ಆದರೆ ದೂರುದಾರರು ಹಾಜರುಪಡಿಸಿದ ಆದಾಯ ದೃಢೀಕರಣ ಪತ್ರದ ಪ್ರತಿಯು ನೆಲಮಂಗಲ ತಹಶೀಲ್ದಾರ್ ಕಛೇರಿಯಿಂದ ನೀಡಿದ್ದಾಗಿರುತ್ತದೆ. ಆದ್ದರಿಂದ 1,3,4,5 ಮತ್ತು 6ನೇ ಎದುರುದಾರರು ಅಕ್ರಮವಾಗಿ ಹಾಗೂ ಕಾನೂನುಬಾಹಿರವಾಗಿ ಕಡಿಮೆ ಆದಾಯ ನಮೂದಿಸಿ ಡಾ.ಜಿ.ಶಿವಪ್ರಸಾದ್ ಅವರಿಗೆ ಆದಾಯ ದೃಢೀಕರಣ ಪತ್ರ ನೀಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

**6ನೇ** ಎದುರುದಾರರು ಡಾಟಾ ಆಪರೇಟರ್ ಆಗಿದ್ದು, ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಕೆ.ಸಿ.ಎಸ್.ನಿಯಮಾವಳಿಗಳು ಅನ್ವಯಿಸುವುದಿಲ್ಲ.

13. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 6ನೇ ಎದುರುದಾರರಾದ ಶ್ರೀ ರಂಗನಾಥ, ಡಾಟಾ ಎಂಟ್ರಿ ಆಪರೇಟರ್, ಇವರು ಅಕ್ರಮವಾಗಿ ಆದಾಯ ದೃಢೀಕರಣ ಪ್ರಮಾಣಪತ್ರ ಕಂಪ್ಯೂಟರ್ ಶಾಖೆಯಿಂದಲೇ ನೀಡಿದ್ದರಿಂದ ಇವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

14. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

10/7/17.

**[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

10/7